ಅಮೆರಿಕದ ಅರಿಜೋನಾದಲ್ಲಿ, ಕೊಲೊರೆಡೊ ನದಿಯಿಂದ ಉಂಟಾದ 217 ಮೈಲಿ ಉದ್ದ– 8 ರಿಂದ 20 ಮೈಲಿ ಅಗಲದ; ಕೆಲವೆಡೆ ಒಂದು ಮೈಲಿಗಿಂತಲೂ ಹೆಚ್ಚು ಆಳವಿರುವ 'ಗ್ರ್ಯಾಂಡ್ ಕ್ಯಾನಿಯನ್' ಹೆಸರಿನ ನಿಗೂಢ ಕಣಿವೆ ಇದೆ. ನಾನಿಲ್ಲಿ ಆ ಬಗ್ಗೆ ಹೇಳಲು ಹೊರಟಿಲ್ಲ. ಆದರೆ ಇದರದ್ದೊಂದು ಸಣ್ಣ ಹೋಲಿಕೆಯಂತಿರುವ ಕಣಿವೆ ಬೆಂಗಳೂರಿನಿಂದ ಕೇವಲ 30 ಕಿಲೋಮೀಟರ್ ದೂರದಲ್ಲಿದೆ. ಕೋಲಾರ ಜಿಲ್ಲೆಯ ಶಿಡ್ಲಘಟ್ಟದ 'ಜಂಗಮಕೋಟೆ'ಯೇ ಈ ಕಣಿವೆ ಇರುವ ಪ್ರದೇಶ.

ಸುಮಾರು 10 ಕಿಲೋಮೀಟರ್ ಉದ್ದಕ್ಕೂ ಅಂದರೆ ಹೊಸಕೋಟೆಯವರೆಗೂ ಇದು ಮುಂದುವರೆದಿದೆ. 10 ರಿಂದ 30 ಮೀಟರ್‌ಗಳವರೆಗೂ ಆಳವಿರುವ ಈ ವಿಶಾಲ ಕಣಿವೆ ಕೆಲವೆಡೆ ಮಾತ್ರ ಒಂದೆರಡು ಅಡಿಗಳಷ್ಟು ಮಾತ್ರವೇ ಅಗಲವಿದೆ.

ಕಾಲಾಂತರದ ನೀರ ಹರಿವಿಗೆ ಸಿಲುಕಿ, ಮೆದು ಮಣ್ಣು ಕರಗಿ ಕೊಚ್ಚಿ ಹೋಗುತ್ತಾ, ನುರುಜುಗಲ್ಲಿನ ಗಟ್ಟಿ ಮಣ್ಣು ಮಾತ್ರವೇ ಉಳಿದುಕೊಂಡು ಈ ಬೆಟ್ಟಸಾಲುಗಳು ಕುತೂಹಲ ಕೆರಳಿಸುವ ಚಿತ್ರ–ವಿಚಿತ್ರವಾದ ಆಕೃತಿಗಳ ಗುಂಪಾಗಿ ರೂಪುಗೊಂಡಿವೆ. ಸೃಷ್ಟಿಯ ಈ ಅದ್ಭುತ ತಾಣ ಛಾಯಾಗ್ರಹಣಕ್ಕೂ, ಚಾರಣಕ್ಕೂ ಹೇಳಿ ಮಾಡಿಸಿದಂತಿದೆ.



